**ಸಾಕ್ಷಿಗೆ ದಿನಾಂಕ 24-01-2025ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಶ್ರೀ Sri SAK ಅರ್ಜಿದಾರರ ಪರ ವಕೀಲರಿಂದ**

ಶಯಡ್ರಾಮಿ ಪೊಲೀಸ್ ಠಾಣಾ ಗು.ನಂ.27/2022 ರಲ್ಲಿ ಸಲ್ಲಿಸಿದ ಹೇಳಿಕೆ ದೂರಿನ ದೃಢೀಕೃತ ನಕಲನ್ನು ಹಾಜರುಪಡಿಸಿದು ಅದನ್ನು ನಿಶಾನೆ ಪಿ-19 ಎಂದು ಗುರುತಿಸಲಾಯಿತು.

ಶಯಡ್ರಾಮಿ ಪೊಲೀಸ್ ಠಾಣಾ ಗು.ನಂ.27/2022 ರ ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಪಿ-20 ಎಂದು ಗುರುತಿಸಲಾಯಿತು.

ಶಯಡ್ರಾಮಿ ಪೊಲೀಸ್ ಠಾಣಾ ಗು.ನಂ.27/2022ರ ಅಪರಾಧ ವಿವರ ನಮೂನೆಯ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಪಿ-21 ಎಂದು ಗುರುತಿಸಲಾಯಿತು.

ಶಯಡ್ರಾಮಿ ಪೊಲೀಸ್ ಠಾಣಾ ಗು.ನಂ.27/2022 ರ ನನಗೆ ಸಂಬಂಧಸಿದ ಗಾಯದ ಪ್ರಮಾಣ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಪಿ-22 ಎಂದು ಗುರುತಿಸಲಾಯಿತು.

ಶಯಡ್ರಾಮಿ ಪೊಲೀಸ್ ಠಾಣಾ ಗು.ನಂ.27/2022 ರ IMV ವರದಿಯ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಪಿ-23 ಎಂದು ಗುರುತಿಸಲಾಯಿತು.

ಶಯಡ್ರಾಮಿ ಪೊಲೀಸ್ ಠಾಣಾ ಗು.ನಂ.27/2022 ರ ಅಂತಿಮ ವರದಿಯ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಪಿ-24 ಎಂದು ಗುರುತಿಸಲಾಯಿತು

ಸಿಸಿ 327/2022 ರ ಪ್ರಕರಣದ ಆದೇಶ ಪುಟಗಳ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಪಿ-25 ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ ಶ್ರೀ ವಿ.ಸಿ.ಎಂ.ಪಿ. 2ನೇ ಎದುರುದಾರರ ಪರ ವಕೀಲರಿಂದ</u>**

ಅಪಘಾತವಾದ ದಿನದಂದು ನಾನು ಬೈಕಿನ ಮೇಲೆ ನನ್ನ ಮಾಮ ಸುಭಾಶ್ ರವರೊಂದಿಗೆ ಘುತ್ತರಗಿಗೆ ಹೋಗಿದ್ದೆ. ಸದರಿ ಸುಭಾಶನಿಗೆ ಸುಧಾಕರ್ ಅಂತಾ ಸಹ ಕರೆಯುತ್ತಾರೆ. ಅಪಘಾತದ ನಂತರ ದೂರನ್ನು ನಮ್ಮ ತಂದೆ ರಂಗಪ್ಪ ಹಾಗೂ ಮಾಮ ಸುಧಕಾರ್ ನೀಡಿರುತ್ತಾರೆ. ದೂರಿನಲ್ಲಿ ಬರೆದಿರುವ ವಿಚಾರ ಸರಿಯಾಗಿದೆ.

ನಾವು ರಾತ್ರಿ ದ್ವಿ-ಚಕ್ರ ವಾಹನದ ಮೇಲೆ ಹೋಗುತ್ತಿದ್ದು ನಮ್ಮ ಮಾಮ ದ್ವಿ-ಚಕ್ರ ವಾಹನ ಚಾಲನೆ ಮಾಡುತ್ತಿದ್ದ ನಾನು ಸದರಿ ವಾಹನದ ಹಿಂಬದಿಯಲ್ಲಿ ಗಾರೆ ಕೆಲಸದ ಸಲಕರಣಗಳನ್ನು ಹಿಡಿದುಕೊಂಡು ಕುಳಿತಿದ್ದೆ ನನ್ನ ಮಾಮ ಗಾಡಿಯನ್ನು ಜೋರಾಗಿ ನಡೆಸುತ್ತಿದ್ದ ಆಗ ಎದುರಿನಿಂದ ಒಂದು HF Deluxe ದ್ವಿ-ಚಕ್ರ ವಾಹನ ಬಂದು ನಮ್ಮ ವಾಹನಕ್ಕೆ ಡಿಕ್ಕಿಪಡಿಸಿದ ಕಾರಣ ಅಪಘಾತವಾಗಿರುತ್ತದೆ. ಸದರಿ HF Deluxe ದ್ವಿ-ಚಕ್ರ ನಂ.ಕೆಎ-32 ಇಡಬ್ಲು-7495ರ ಸವಾರನು ವಾಹನವನ್ನು ಚಾಲನೆ ಮಾಡಿಕೊಂಡು ಬಂದು ಅಪಘಾತಪಡಿಸಿರುತ್ತಾನೆಂದು ದೂರಿನಲ್ಲಿ ಹಾಗೂ ದೋಷಾರೋಪಣೆ ಪಟ್ಟಿಯಲ್ಲಿ ನಮೂದು ಆಗಿರುತ್ತದೆ ಎಂದರೆ ನಿಜ. ಸದರಿ HF Deluxe ದ್ವಿ-ಚಕ್ರ ವಾಹನದ ಸವಾರ ವಾಹನ ಚಾಲನಾ ಪರವಾನಿಗೆ ಪತ್ರ ಹೊಂದಿಲ್ಲ ಎಂದು ಪೊಲೀಸರು ದೋಷಾರೋಪಣೆ ಪಟ್ಟಿಯಲ್ಲಿ ನಮೂದು ಮಾಡಿರುತ್ತಾರೆಂದರೆ ನಿಜ. ಸದರಿ HF Deluxe ದ್ವಿ-ಚಕ್ರ ವಾಹನದಿಂದ ಅಪಘಾತವಾಗಿದ್ದರೂ ಸಹ ಸದರಿ ವಾಹನದ ಮಾಲೀಕ ಹಾಗೂ ವಿಮೆ ಕಂಪನಿಯನ್ನು ಪಕ್ಷಗಾರರನ್ನಾಗಿ ಮಾಡದೇ 1ನೇ ಎದುರುದಾರ ಹಾಗೂ 2ನೇ ಎದುರುದಾರರ ಮೇಲೆ ಅನಾವಶ್ಯಕವಾಗಿ ಪ್ರಸ್ತುತ ಅರ್ಜಿ ಸಲ್ಲಿಸಿರುತ್ತೇನೆಂದರೆ ಸಾಕ್ಷಿ ಪ್ರಕರಣ ದಾಖಲಿಸಿಲ್ಲ ಎಂದು ನುಡಿಯುತ್ತಾರೆ.

ನಾನು ಕುಳಿತುಕೊಂಡು ಹೋಗುತ್ತಿದ್ದ ದ್ವಿ-ಚಕ್ರ ವಾಹನ ನಂ.ಕೆಎ-32 ಹೆಚ್.ಬಿ-0036 ಸವಾರನಾದ ಸುಧಾಕರ ಆತ ಸದರಿ ವಾಹನವನ್ನು ನಿರ್ಲಕ್ಷತನ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡುತ್ತಿದ್ದ

ಎಂದು ಎಲ್ಲಿಯೂ ನಮೂದು ಆಗದೇ ಇದ್ದರೂ ಸಹ ಸದರಿ ದ್ವಿ-ಚಕ್ರ ವಾಹನದ ಮಾಲೀಕ ಹಾಗೂ ವಿಮೆ ಮಾಡಿಸಿದ ಕಂಪನಿಯ ಮೇಲೆ ಅನಾವಶ್ಯಕವಾಗಿ ಪ್ರಸ್ತುತ ಪ್ರಕರಣ ಸಲ್ಲಿಸಿರುತ್ತೇವೆಂದರೆ ಸಾಕ್ಷಿ ಸುಧಾಕರನದೇ ತಪ್ಪು ಇದ್ದು ಆತನೇ ದ್ವಿ-ಚಕ್ರ ವಾಹನವನ್ನು ವೇಗವಾಗಿ ಚಲಾಯಿಸುತ್ತಿದ್ದ.

ಸುಧಾಕರನಿಂದಲೇ ಅಪಘಾತವಾಗಿದೆ ಎಂದು ಎಲ್ಲಿಯೂ ದೂರು ನೀಡಿಲ್ಲ. ಸುಧಾಕರ ಅತಿವೇಗ ಮತ್ತು ಅಜಾಗರೂಕತೆಯಿಂದ ದ್ವಿ-ಚಕ್ರ ವಾಹನ ಚಲಾಯಿಸುತ್ತಿದ್ದ ಎಂದು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಸಾಕ್ಷಿ ಪ್ರಮಾಣಪತ್ರ ಸಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸಾಕ್ಷಿ ಮೊದಲೇ ಹೇಳಿದ್ದೆ ಎಂದು ನುಡಿಯುತ್ತಾರೆ.

ಅಪಘಾತದಲ್ಲಿ ನನ್ನ ಕಣ್ಣಿನ ಹುಬ್ಬಿನ ಹತ್ತಿರ ಹಾಗೂ ಕಣ್ಣಿನ ಕೆಳಭಾಗದಲ್ಲಿ ಗಾಯಳಾಗಿ 28 ಹೊಲಿಗೆ ಬಿದ್ದಿರುತ್ತವೆಂದು ನುಡಿಯುತ್ತಾರೆ. ಅಪಘಾತವಾದ ನಂತರ ಸಿಂದಗಿಯ ಖಾಸಗಿ ಕಾಗೆ ಆಸ್ಪತ್ರೆಯಲ್ಲಿ 8 ದಿನಗಳವರೆಗೆ ಚಿಕಿತ್ಸೆ ಪಡೆದಿರುತ್ತೇನೆ. ಸದರಿ ಆಸ್ಪತ್ರೆ ಹೊರತುಪಡಿಸಿ ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ. ನನಗೆ ರೂ.1 ಲಕ್ಷಕ್ಕಿಂತ ಹೆಚ್ಚಿ ಗೆ ಖರ್ಚಾಗಿದೆ. ನನಗೆ ಭುಜದ ಹತ್ತಿರ ಮೂಳೆ ಸೆಳೆತವಾಗಿದೆ ಎಂದು ಶರ್ಟಿನ ಗುಡಿ ತೆಗೆದು ತನ್ನ ಕೈಯನ್ನು ತೋರಿಸಿರುತ್ತಾರೆ. ನನಗೆ ಆದಂತಹ ಗಾಯಗಳು ವಾಸಿವಾಗಿವೆ ಎಂದರೆ ಸರಿಯಲ್ಲ. ಸಾಕ್ಷಿ ಇನ್ನು ಬಾವು ಇದೆ ಎಂದು ನುಡಿಯುತ್ತಾರೆ.

ನಾನು ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ನಿಜ. ನನಗೆ ಆದಂತಹ ಗಾಯಗಳು ವಾಸಿಯಾದ ಕಾರಣ ಹಾಗೂ ನನಗೆ ಅಂಗನ್ಯೂನ್ಯತೆ ಇಲ್ಲದಿದ್ದರಿಂದ ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ ಎಂದರೆ ಸಾಕ್ಷಿ ಗಾಯ ಮಾಸಿಲ್ಲ ಆದರೆ ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ಆಸ್ಪತ್ರೆ ಹಾಗು ಔಷಧಿ ಬಿಲ್ ಹಾಗೂ ಸಲಹಾ ಚೀಟಿಗಳನ್ನು ಸೃಷ್ಠಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಕೇಳಿರುವ ಪರಿಹಾರ ಮೊತ್ತಕ್ಕೆ ಯಾವುದೇ ಆಧಾರ ಇಲ್ಲ ಅಂದಾಜಿನ ಮೇಲೆ ಸಲ್ಲಿಸಿರುತ್ತೇನೆದರೆ ಸರಿಯಲ್ಲ. 1ನೇ ಎದುರುದಾರನ ವಾಹನದ ಚಾಲಕನ ಮೇಲೆ ಯಾವುದೇ ಪ್ರಕರಣ ದಾಖಲಾಗದೇ ಇದ್ದರೂ ಸಹ 1ನೆ ಎದುರುದಾರನ ಮೇಲೆ ಹಾಗೂ ವಿಮೆ ಕಂಪನಿಯ ಮೇಲೆ ಪರಿಹಾರ ಹಣ ಕೇಳಿ ಸುಳ್ಳು ಪ್ರಕರಣ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,ಜೇವರ್ಗಿ